
# ವೀರಭಕ್ತ ಗಿರೀಶ್‌ಚಂದ್ರ ಘೋಷ್

ಪ್ರವ್ರಾಜಿಕಾ ಪರಮಪ್ರಾಣಾ

*(ಹಿಂದಿನ ಸಂಚಿಕೆಯಿಂದ)*



**ಚೈ**ತನ್ಯಲೀಲಾ ನಾಟಕವು ಜನಪ್ರಿಯವಾಗುತ್ತಿದ್ದ ಈ ಸಮಯದಲ್ಲಿಯೇ ನಡೆದ ಮತ್ತೊಂದು ಅದ್ಭುತ ಘಟನೆ ಗಿರೀಶ್ ಘೋಷನಂಥ ದೃಢಚಿತ್ತದ ವ್ಯಕ್ತಿಯ ಮನಸ್ಸನ್ನೂ ಕಲಕಿತು. ಶ್ರೀರಾಮಕೃಷ್ಣರ ಸಮಕಾಲೀನನಾದ ರಾಧಾರಮಣ ಚರಣದಾಸ ದೇವ ಕಟ್ಟುನಿಟ್ಟಾದ ವೈಷ್ಣವ ಹಾಗೂ ಉನ್ನತ ದರ್ಜೆಯ ಆಧ್ಯಾತ್ಮಿಕ ಸಾಧಕ. ಕೆಲವರ್ಷಗಳ ಹಿಂದೆ, ಇವರ ೧೫೦ ನೇ ವರ್ಷದ ಜಯಂತಿ ಬಂಗಾಳದ ವಿಭಿನ್ನ ಭಾಗಗಳಲ್ಲಿ ನಡೆಯಿತು. ಗಿರೀಶ್ ಘೋಷನ **ಚೈತನ್ಯಲೀಲಾ** ಇಂಥ ಸಾಧಕ ಮಹಾತ್ಮನನ್ನೂ ಸ್ಟಾರ್ ಥಿಯೇಟರಿನತ್ತ ಆಕರ್ಷಿಸಿತು. ನಾಟಕ ನೋಡುತ್ತ ನೋಡುತ್ತ, ಚೈತನ್ಯದೇವನ ಕೀರ್ತನೆಗಳನ್ನು ಕೇಳುತ್ತಾ ಕೇಳುತ್ತಾ, ಅವರು ಪ್ರೇಮಾನಂದದಲ್ಲಿ ಮುಳುಗಿಹೋದರು. ಕೃಷ್ಣಭಕ್ತರಾದ ಅವರು ಭಾವಾವೇಶದಿಂದ ಬಾಹ್ಯಜ್ಞಾನಶೂನ್ಯರಾಗಿ ಕೆಳಕ್ಕೆ ಬಿದ್ದುಬಿಟ್ಟರು. ನಾಟಕಶಾಲೆಯಲ್ಲಿ ಕೋಲಾಹಲವೆದ್ದಿತು. ಆತನನ್ನು ಮೇಲೆತ್ತಲೆಂದು ಆ ಪುಣ್ಯಶರೀರವನ್ನು ಸ್ಪರ್ಶಿಸಿದವರಿಗೆಲ್ಲಾ ಒಂದು ಅಪೂರ್ವ ಅನುಭವವಾಯಿತು. ಭಗವದ್ಭಕ್ತಿಯ ಆವೇಶ ಅವರ ಒಳಗನ್ನೂ ಪ್ರವೇಶಿಸಿ, ಅವರೆಲ್ಲರೂ ಆನಂದದಿಂದ ಭಗವಂತನ ನಾಮ ಸಂಕೀರ್ತನೆಯಲ್ಲಿ ಮತ್ತರಾದರು. ಗಿರೀಶ್ ಚಂದ್ರನ ಕಣ್ಣೆದುರಿಗೇ ಈ ಘಟನೆ ನಡೆಯಿತು. ಆ ವೈಷ್ಣವ ಸಾಧಕರಿಗೆ ಬಾಹ್ಯಜ್ಞಾನ ಬಂದ ಮೇಲೆ ಗಿರೀಶ್ ಅವರ ಬಳಿ ಹೋಗಿ ಕೈಮುಗಿದು ನಿಂತುಕೊಂಡನು. ಸುತ್ತಲಿನ ಜನಗಳಿಂದ ನಾಟಕದ ಪ್ರಶಂಸೆಯನ್ನು ಕೇಳುತ್ತ ಗಿರೀಶ್ ಎಲ್ಲರೆದುರಿಗೆ ವಿನೀತನಾಗಿ ಆ ಬಾಬಾಜಿಯ ಬಳಿ ತನ್ನ ಮನಸ್ಸನ್ನು ಬಿಚ್ಚಿ ಹೇಳಿಕೊಂಡನು. ತನಗೆ ಈ ನಾಟಕವನ್ನು ರಚಿಸುವಾಗ ಅಥವಾ ಅಭಿನಯದ ಸಮಯದಲ್ಲಿಯೂ ಇದರಲ್ಲಿನ ಯಾವ ಮಹತ್ವವೂ ಗೋಚರವಾಗಲಿಲ್ಲ. ಅಲ್ಲದೆ ಉನ್ಮಾದದ ಈ ಭಕ್ತಿಭಾವದ ಬಗ್ಗೆ ಮನಸ್ಸಿನಲ್ಲಿ ಸಂಪೂರ್ಣವಾಗಿ ಒಪ್ಪಿಗೆಯೂ ಇರಲಿಲ್ಲವೆಂದು ಗಿರೀಶ್ ನಿವೇದಿಸಿಕೊಂಡನು. ಚರಣದಾಸ ಬಾಬಾಜಿಯ ಈ ಭಕ್ತಿಯ ಆವೇಶವನ್ನು ಕಂಡ ಮೇಲೆ ತನ್ನ ಮನಸ್ಸಿನ ಭ್ರಾಂತಿ ಹಾಗೂ ಅನುಮಾನಗಳು ದೂರವಾಗಿವೆ ಎಂದ ಗಿರೀಶ್, ಈ ದಿವ್ಯಲೀಲೆಯ ಅನುಭೂತಿ ತನ್ನಿಂದ ಇನ್ನೂ ಬಹು ದೂರದಲ್ಲಿದೆ, ಬುದ್ಧಿಯ ಮಟ್ಟದಲ್ಲಿ ಮಾತ್ರ ತಾನೀಗ ಇದನ್ನು ಒಪ್ಪುವ ಹಂತಕ್ಕೆ ತಲುಪಿದ್ದೇನೆ ಎಂದು ಸರಳಭಾವದಿಂದ ಒಪ್ಪಿಕೊಂಡನು ('*ಉದ್ಬೋಧನ*', ಫೆಬ್ರವರಿ ೨೦೦೫, ಪು. ೧೨೩).

"ಈ ನಾಟಕವನ್ನು ಬರೆದು ಗಿರೀಶ್‌ಚಂದ್ರ, ಪಾಶ್ಚಾತ್ಯ ಶಿಕ್ಷಣಾಭಿಮಾನಿಗಳಾದ ನವ್ಯ ಬಂಗಾಳಿಗಳು ಹಾಗೂ ತಲೆ ಬೋಳಿಸಿ ನಾಮ ಹಚ್ಚಿಕೊಂಡ ವೈಷ್ಣವರು ಒಟ್ಟಿಗೆ ಕುಳಿತು ಒಂದೇ ನಾಟಕವನ್ನು ನೋಡಿ ಕಣ್ಣೀರು ಸುರಿಸುವಂತೆ ಮಾಡಿದನು" ಎನ್ನುತ್ತಾರೆ, ಗಿರೀಶನ ಸಮಕಾಲೀನರಾದ ಅವಿನಾಶಚಂದ್ರ ಗಂಗೋಪಾಧ್ಯಾಯ.

ಚೈತನ್ಯಲೀಲಾ ನಾಟಕವನ್ನು ಕಂಡು ಆನಂದಿಸಿದವರಲ್ಲಿ ಸಹಜವಾಗಿಯೇ ನಾಟಕಕಾರ ಗಿರೀಶನ ವಿಚಾರವಾಗಿಯೂ ಶ್ರದ್ಧೆ ಗೌರವಗಳುಂಟಾದವು. ವೈಷ್ಣವರನೇಕರು ಅಭಿನಂದಿಸಲು ಗಿರೀಶನ

ಮನೆಗೂ ಹೋಗಲಾರಂಭಿಸಿದರು. ಆರಂಭದಲ್ಲಿ ಇವರೆಲ್ಲರೊಂದಿಗೆ ಗಿರೀಶ್ ತುಂಬ ತಾಳ್ಮೆಯಿಂದಲೇ ನಡೆದುಕೊಂಡನು. ಆದರೆ ಒಳಗೊಳಗೇ ಅವನಿಗೆ ಈ ಎಲ್ಲ ಹೊಗಳಿಕೆ, ಗೌರವ ಪ್ರದರ್ಶನಗಳು ಅಸಹನೀಯವೆನಿಸತೊಡಗಿದವು. ಮನುಷ್ಯನೊಬ್ಬನೆದುರಿಗೆ ದೀನನಾಗಿ ನಿಂತು ಭಕ್ತಿ ಪ್ರದರ್ಶನ ಮಾಡುವುದನ್ನು ನೆನೆಸಿಕೊಂಡರೇ ಗಿರೀಶನಿಗೆ ಹೇಸಿಗೆಯಾಗುತ್ತಿತ್ತು.

ಒಮ್ಮೆ ವೈಷ್ಣವ ಬಾಬಾಜಿಯೊಬ್ಬ ಬೆಳಗಾಗುವಷ್ಟರಲ್ಲೇ ಗಿರೀಶನ ಮನೆಯ ಬಾಗಿಲಿನಲ್ಲಿ ಹಾಜರಾದನು. ಬಾಬಾಜಿಯ ಹೊಗಳಿಕೆಯನ್ನು ಗಿರೀಶ್ ಹಲ್ಲುಕಚ್ಚಿ ಸಹಿಸಿಕೊಂಡನು. ಕೊನೆಯಲ್ಲಿ ಭಗವಂತನ ಅಗಣಿತ ಕೃಪೆಯಿಂದಲೇ ಇಂಥ ನಾಟಕವನ್ನು ರಚಿಸಲು ಸಾಧ್ಯವಾಯಿತೆಂದು ಆತ ವಿವರಿಸಲು ಆರಂಭಿಸಿದಾಗ ಗಿರೀಶ್ ಮನೆಯೊಳಗೆ ಧಾವಿಸಿ ಹೋದನು. ತನ್ನ ಮಂಚದ ಕೆಳಗಿನಿಂದ ಹೆಂಡದ ಒಂದು ಸೀಸೆಯನ್ನು ಹೊರಗೆ ತೆಗೆದು, ಗಾಬರಿಯಾಗಿ ನೋಡುತ್ತಿದ್ದ ಬಾಬಾಜಿಯ ಮುಖದ ಎದುರು ಅದನ್ನು ಹಿಡಿದು, "ಇದರ ಕೃಪೆಯಿಂದಲೇ ಈ ನಾಟಕವನ್ನು ಬರೆಯಲು ಸಾಧ್ಯವಾಯಿತು" ಎಂದು ಕೂಗಾಡಿ ಅವನನ್ನು ಮನೆಯಿಂದ ಓಡಿಸಿದನು.

ಥಿಯೇಟರಿನಲ್ಲಿ ವೇಶ್ಯೆಯರನ್ನು ನಟಿಯರನ್ನಾಗಿ ಆರಿಸಿ ಕೊಂಡಿದ್ದಕ್ಕೆ ಅಂದಿನ ಶಿಷ್ಟ ಸಮಾಜ ಗಿರೀಶನನ್ನು ಹೇಯದೃಷ್ಟಿಯಿಂದ ಕಾಣುತ್ತಿತ್ತು. ಇದುವರೆಗೂ ಅಪಮಾನವನ್ನೇ ಅನುಭವಿಸುತ್ತಿದ್ದವನು ಈಗ ಇದ್ದಕ್ಕಿದ್ದಂತೆ ಎದುರಾಗಿರುವ ಮಾನಸನ್ಮಾನಗಳನ್ನು ಕಂಡು ಉದಾಸೀನನಾದ ಗಿರೀಶ್ ಘೋಷ್ ತನ್ನೊಂದು ಕವಿತೆಯಲ್ಲಿ ಹೀಗೆ ಹೇಳಿಕೊಳ್ಳುತ್ತಾನೆ:

**ತಿರಸ್ಕಾರ ಪುರಸ್ಕಾರ ಕಲಂಕ ಕಂಠೇರ್ ಹಾರ್**
**ತಥಾಪಿ ಏ ಪಥೆ ಪದಕೊರೆಚಿ ಅರ್ಪಣ್**

"ತೆಗಳಿಕೆ, ಹೊಗಳಿಕೆಗಳಿಂದ ಏನಾಗಬೇಕಾಗಿದೆ? ಕೆಟ್ಟ ಚರಿತ್ರೆ ಯವನೆಂಬ ಕಳಂಕವನ್ನು ಹಾರದಂತೆ ನನ್ನ ಕೊರಳಿಗೆ ಹಾಕಲಾಗಿದೆ. ಆದರೂ ನಾನು ನಾಟಕಶಾಲೆಯನ್ನೇ ನನ್ನ 'ಕಾರ್ಯರಂಗ' ವಾಗಿ ಆರಿಸಿಕೊಂಡಿದ್ದೇನೆ."

ಇದಕ್ಕೆ ಕಾರಣವನ್ನೂ ಆತ ಈ ಕವಿತೆಯಲ್ಲಿಯೇ ಹೇಳುತ್ತಾನೆ – **ಚಿರ–ಪರ–ಆರಾಧನಾ** – ನಾಟಕರಂಗದ ಮೂಲಕ ಯಾವಾಗಲೂ ಇತರರ ಸೇವೆ, ಆರಾಧನೆಯೇ ಆತನ ಉದ್ದೇಶವಾಗಿತ್ತು.

ಚೈತನ್ಯಲೀಲಾ ನಾಟಕ ನಡೆಯುತ್ತಿದ್ದ ಸಂದರ್ಭದಲ್ಲಿ ಸ್ಟೇಜಿನ ಹಿನ್ನೆಲೆಯ ದೃಶ್ಯಗಳ ಚಿತ್ರ ಬರೆಯುವ ಕಲಾವಿದನೊಂದಿಗೆ ಗಿರೀಶ್ ಒಮ್ಮೆ ಆರಾಮವಾಗಿ ಹರಟುತ್ತಾ ಆತನ ಧಾರ್ಮಿಕ ವಿಶ್ವಾಸದ ಬಗ್ಗೆ ಪ್ರಶ್ನಿಸಿದನು. ಚಿತ್ರಕಾರ ವೈಷ್ಣವ ಭಕ್ತ. ಆತ ತನ್ನಲ್ಲಿ ಗಾಢವಾಗಿರುವ ಭಗವಂತನ ಬಗೆಗಿನ ವಿಶ್ವಾಸದ ಬಗ್ಗೆ ಹೇಳುತ್ತಾ, "ಯೋಗ್ಯ ಗುರುವಿನಿಂದ ಉಪದೇಶ ಪಡೆದರೆ ಈ ದುರ್ಲಭವಾದ ಭಕ್ತಿಯನ್ನು ಅನಾಯಾಸವಾಗಿ ಪಡೆಯಬಹುದು" ಎಂದು ಹೇಳಿ, ಗಿರೀಶನ ಮನಸ್ಸಿನಲ್ಲಿ ದೊಡ್ಡದೊಂದು ಬಿರುಗಾಳಿಯನ್ನೇ ಎಬ್ಬಿಸಿದನು. ಗಿರೀಶ್ ತನ್ನ ಲೇಖನವೊಂದರಲ್ಲಿ ತದನಂತರದ ಅನುಭವವನ್ನು ಬರೆದಿದ್ದಾನೆ. ಚಿತ್ರಕಾರನ ಮಾತುಗಳನ್ನು ಕೇಳಿದ ನಂತರ ಆತ ನೇರವಾಗಿ ತನ್ನ ಮನೆಗೆ ಹೋಗಿ ತನ್ನ ಜೀವನದ ದುಃಖದುರ್ದೆಶೆಗಳನ್ನು, ತನ್ನ ಮನಸ್ಸಿನಲ್ಲಿ ಏಳುತ್ತಿದ್ದ ಸಂದೇಹ, ದ್ವಂದ್ವಗಳನ್ನು ಕುರಿತು ಚಿಂತಿಸುತ್ತ ಅಸಹಾಯಕನಾಗಿ ಕಣ್ಣೀರು ಕರೆದನು. ತಾನು ಯಾರಲ್ಲಿ ವಿಶ್ವಾಸವಿಟ್ಟು ಪ್ರಾರ್ಥಿಸಿ ಶಾಂತಿ ಪಡೆಯುತ್ತಿದ್ದನೋ ಆ ತಾರಕೇಶ್ವರ ಶಿವನಲ್ಲಿಯೇ ಪ್ರಾರ್ಥಿಸಿದನು, "ನೀನೇ ನನಗೆ ಗುರುವಾಗಿ ಬಾ."

೧೮೮೪ ನೇ ಇಸವಿ, ಸೆಪ್ಟೆಂಬರ್ ೨೧ ನೇ ತಾರೀಖು. ರಾತ್ರಿ ಎಂಟು ಗಂಟೆಯ ಸಮಯ. ಶ್ರೀರಾಮಕೃಷ್ಣರನ್ನು ಹೊತ್ತ ಮಹೇಂದ್ರ ಮುಖ್ಯೋಪಾಧ್ಯಾಯನ ಕುದುರೆ ಗಾಡಿ ಬೀಡನ್ ಸ್ಟ್ರೀಟನ್ನು ಪ್ರವೇಶಿಸಿ ಸ್ಟಾರ್ ಥಿಯೇಟರಿನ ಎದುರು ನಿಂತಿತು. ನಾಟಕ ಜಗತ್ತಿನಲ್ಲಿಯೇ ಒಂದು ಐತಿಹಾಸಿಕ ದಿನ ಅದು.

ಗಿರೀಶ್ ಘೋಷ್ ಥಿಯೇಟರಿನ ಕಾಂಪೌಂಡಿನಲ್ಲಿ ಅತ್ತಿಂದಿತ್ತ ನಡೆದಾಡುತ್ತಿದ್ದನು. ಮಹೇಂದ್ರ ಮುಖ್ಯೋಪಾಧ್ಯಾಯ ಓಡಿಬಂದು ಆತನಿಗೆ ಹೇಳಿದನು, "ಪರಮಹಂಸರು ನಾಟಕ ನೋಡಲು ಬಂದಿದ್ದಾರೆ. ಅವರನ್ನು ಒಂದು ಒಳ್ಳೆಯ ಜಾಗದಲ್ಲಿ ಕೂರಿಸಬೇಕು." ಗಿರೀಶ್ ಉತ್ತರವಿತ್ತನು, "ಅವರಿಗೆ ಟಿಕೇಟ್ ಬೇಕಾಗಿಲ್ಲ. ಆದರೆ ಉಳಿದವರು ಟಿಕೇಟ್ ಕೊಳ್ಳಬೇಕು." ಗಿರೀಶ್ ಈ ಮೊದಲೇ ಎರಡು ಸಲ, ವಿಭಿನ್ನ ಜಾಗಗಳಲ್ಲಿ ಶ್ರೀರಾಮಕೃಷ್ಣರನ್ನು ನೋಡಿದ್ದನು. ಆದರೆ ಅವರಲ್ಲಿ ಯಾವ ವಿಶೇಷವನ್ನೂ ಅವನು ಕಂಡಿರಲಿಲ್ಲ. ಧರ್ಮಗುರುಗಳ ಬಗ್ಗೆ ಅವನಿಗೆ ತನ್ನದೇ ಆದ ಒಂದು ಕಲ್ಪನೆಯಿತ್ತು. ಆ ಕಲ್ಪನೆಗೆ ವ್ಯತಿರಿಕ್ತವಾಗಿ ರಾಮಕೃಷ್ಣರು ಆ ದಿನ ತೋರಿಸಿದ ನಮ್ರ ಆಚರಣೆಯಿಂದ ಆತ ಆಶ್ಚರ್ಯಭರಿತನಾದನು. ಗಿರೀಶ್ ನಮಸ್ಕರಿಸುವ ಮೊದಲು ಅವರೇ ಆತನಿಗೆ ಮತ್ತೆ ಮತ್ತೆ ವಿನೀತರಾಗಿ ನಮಸ್ಕರಿಸಿದರು. ಅವರನ್ನು ಹೆಚ್ಚು ಬೆಲೆಯ ಸೀಟಿನಲ್ಲಿ ಕೂರಿಸಿ, ತನ್ನ ಆರೋಗ್ಯ ಅಷ್ಟು ಚೆನ್ನಾಗಿರದಿದ್ದರಿಂದ ಗಿರೀಶ್ ಮನೆಗೆ ಹೊರಟುಹೋದನು.

ಮರುದಿನ ಎಂದಿನಂತೆ ಗಿರೀಶ್ ಸ್ಟಾರ್ ಥಿಯೇಟರಿಗೆ ಬಂದಾಗ ಅವನಿಗೆ ಒಂದು ಆಶ್ಚರ್ಯದ ಸುದ್ದಿ ಕಾದಿತ್ತು. ಚೈತನ್ಯಲೀಲಾ ನಾಟಕದ ನಂತರ, ಭಾವಾವಿಷ್ಟರಾದ ಶ್ರೀರಾಮಕೃಷ್ಣರು ಚೈತನ್ಯದೇವನ ಅಭಿನಯ ಮಾಡಿದ ನಟಿ ವಿನೋದಿನಿಯನ್ನು ಕಾಣಲು ಹೋದರು. ನಟಿ ವಿನೋದಿನಿ ತನ್ನ ಆತ್ಮಕಥೆಯಲ್ಲಿ ಹೀಗೆ ಬರೆಯುತ್ತಾಳೆ: "ಶ್ರೀರಾಮಕೃಷ್ಣರು ತಮ್ಮ ಎರಡೂ ಕೈಗಳನ್ನೆತ್ತಿ ನನ್ನ ತಲೆಯ ಮೇಲಿಟ್ಟು, ನನ್ನ ಶರೀರ ಹಾಗೂ ಮನಸ್ಸಿನ ಪಾಪರಾಶಿಯನ್ನು ದೂರ ಸರಿಸುವಂತೆ, 'ಅಮ್ಮಾ ನಿನಗೆ ಚೈತನ್ಯವಾಗಲಿ!' ಎಂದು ಹರಸಿದರು. ಜಗತ್ತು ನನ್ನನ್ನು ಅವಹೇಳನೆಯ ದೃಷ್ಟಿಯಿಂದ ನೋಡಿದರೆ ನೋಡಲಿ. ನನಗಿನ್ನು ದುಃಖವಿಲ್ಲ. ಪರಮಾರಾಧ್ಯ ಪರಮ ಪೂಜನೀಯ ಶ್ರೀರಾಮಕೃಷ್ಣ ಪರಮಹಂಸರು ನನಗೆ ಕೃಪೆ ತೋರಿಸಿದ್ದಾರೆ." ಈ ಘಟನೆ ಗಿರೀಶನ

ಕಲ್ಲಿನಂಥ ಮನಸ್ಸನ್ನೂ ಕರಗಿಸಿತು. ನಟನಟಿಯರ ಅಭಿನಯಕ್ಕೆ ಈ ರೀತಿ ಶ್ರದ್ಧೆ, ಗೌರವಗಳನ್ನು ಇದುವರೆಗೂ ಯಾರೂ ತೋರಿಸಿರಲಿಲ್ಲ. ನಾಟಕಕಾರ ಅಮೃತಲಾಲ ಬಸು ಬರೆಯುತ್ತಾರೆ, "ನಿಕೃಷ್ಟಳಾದ ನಟಿಯೊಬ್ಬಳು ಚೈತನ್ಯದೇವನ ಪಾತ್ರದಲ್ಲಿ ಅಭಿನಯಕ್ಕೆ ಇಳಿದ ಆ ದಿನವೇ ನಮ್ಮ ವಂಗದೇಶದ ನಾಟಕರಂಗವು ವೈಕುಂಠದ ಮಟ್ಟಕ್ಕೆ ಏರಿತು. ಸ್ವಯಂ ಭಗವಂತನ ಅವತಾರರಾದ ಶ್ರೀ ಶ್ರೀರಾಮಕೃಷ್ಣ ದೇವರು ದಕ್ಷಿಣೇಶ್ವರದಿಂದ ಈ ಅಭಿನಯವನ್ನು ಕಾಣಲು ಬಂದರು. ನಾವು ಧನ್ಯರಾಗಿ ಹೋದೆವು. ಆ ದಿನ ಅವರ ಜೊತೆಗೆ ಕುಳಿತು ನಾಟಕ ನೋಡಿದವರೆಲ್ಲರೂ ಧನ್ಯರಾದರು." ರಂಗಸಂಚಾಲಕ ಹಾಗೂ ನಟ ಜ್ಞಾನೇಶ್ ಮುಖರ್ಜಿ ಹೀಗೆ ಬರೆಯುತ್ತಾರೆ: "ಶ್ರೀರಾಮಕೃಷ್ಣರು ನಟಿ ವಿನೋದಿನಿಗೆ ಮಾನವೀಯ ಮರ್ಯಾದೆಯನ್ನು ಕೊಟ್ಟರು.... ಇದಾದ ನಂತರವೇ ಸಮಾಜದಲ್ಲಿ ನಟಿಯರ ಬಗ್ಗೆ ಇದ್ದ ಹೇಯ ಮನೋಭಾವ ಕಡಮೆಯಾಗತೊಡಗಿತು" (*ಅನ್ಯಾನ್ಯ ಪ್ರಸಂಗ*, ಪು. ೯೯).

ಗಿರೀಶನ ಇನ್ನೂ ಕೆಲವು ಪೌರಾಣಿಕ ನಾಟಕಗಳನ್ನು ಕಾಣಲು ರಾಮಕೃಷ್ಣರು ಸ್ಟಾರ್ ಥಿಯೇಟರಿಗೆ ಹೋದರು. ಗಿರೀಶನೊಂದಿಗೆ ರಾಮಕೃಷ್ಣರ ಪರಿಚಯ ಗಾಢವಾದಂತೆ, ಆತ ತನ್ನ ಸ್ನೇಹಿತರೊಂದಿಗೆ ದಕ್ಷಿಣೇಶ್ವರಕ್ಕೂ ಹೋಗಿ ಬರಲಾರಂಭಿಸಿದನು. ಇದರಿಂದ ಅಂದಿನ ಸಮಾಜದಲ್ಲಿ ಎರಡು ರೀತಿಯ ಪ್ರತಿಕ್ರಿಯೆ ಎದ್ದಿತು. ಬ್ರಾಹ್ಮಸಮಾಜದ ನೇತಾರ ಶಿವನಾಥ ಶಾಸ್ತ್ರಿಯನ್ನು ರಾಮಕೃಷ್ಣರು ತುಂಬ ಸ್ನೇಹದಿಂದ ಕಾಣುತ್ತಿದ್ದರು. ಅವನು ಇದ್ದಕ್ಕಿದ್ದಂತೆ ದಕ್ಷಿಣೇಶ್ವರಕ್ಕೆ ಹೋಗುವುದನ್ನು ನಿಲ್ಲಿಸಿದನು. ಈ ಬಗ್ಗೆ ಪ್ರಶ್ನಿಸಿದಾಗ ತಾನು ರಾಮಕೃಷ್ಣರ ಬಳಿ ಹೋಗದ ಕಾರಣವನ್ನು ಶಿವನಾಥಶಾಸ್ತ್ರಿ ಹೀಗೆ ಸ್ಪಷ್ಟಪಡಿಸಿದನು: "ಥಿಯೇಟರಿನ ಕೊಳಕು ನಡತೆಯ ಜನಗಳೊಂದಿಗೆ ಅವರು ಸಂಪರ್ಕವಿಟ್ಟುಕೊಂಡಿದ್ದಾರೆ. ನಮ್ಮಂಥವರು ಇನ್ನು ಅಲ್ಲಿಗೆ ಹೋಗುವುದು ಸಾಧ್ಯವಿಲ್ಲ" (*ವಂಗರಂಗ ಮಂಚ*, ಪು. ೪೦).

ಸಮಾಜಕಲ್ಯಾಣಕ್ಕಾಗಿ ಜೀವನವನ್ನು ಮುಡಿಪಾಗಿಟ್ಟ ಈಶ್ವರ ಚಂದ್ರ ವಿದ್ಯಾಸಾಗರನ ಕೀರ್ತಿಯನ್ನು ಕೇಳಿ ರಾಮಕೃಷ್ಣರು ತಾವಾಗಿಯೇ ಆತನ ಮನೆಗೆ ಹೋದವರು, ದಕ್ಷಿಣೇಶ್ವರಕ್ಕೆ ಬರುವಂತೆ ಅವನನ್ನು ಆಹ್ವಾನಿಸಿದರು. ಆತನೂ ಕೂಡಲೇ ಒಪ್ಪಿಕೊಂಡ. ಆದರೆ ಈ ಮಾತನ್ನು ಆತ ಉಳಿಸಿಕೊಳ್ಳಲಿಲ್ಲ. ಮಹಾನ್ ಸತ್ಯವಂತ ಎಂದು ಹೆಸರಾದ ವಿದ್ಯಾಸಾಗರ ಹೀಗೇಕೆ ಮಾಡಿದ ಎಂದು ವಿಸ್ಮಿತರಾಗಿ ರಾಮಕೃಷ್ಣರು ಅವರಿವರನ್ನು ಪ್ರಶ್ನಿಸಲಾರಂಭಿಸಿದರು. 'ಶ್ರೀರಾಮಕೃಷ್ಣ ವಚನವೇದ'ದ ಲೇಖಕರಾದ ಮಾಸ್ಟರ್ ಮಹಾಶಯರು ಒಮ್ಮೆ ಅವರಿಗೆ ಉತ್ತರಿಸಿದರು, "ಗಿರೀಶ್ ಘೋಷ್‌ನಂಥವರು ಇಲ್ಲಿಗೆ ಬರಲಾರಂಭಿಸಿದ್ದರಿಂದ ಎನ್ನಿಸುತ್ತದೆ, ವಿದ್ಯಾಸಾಗರ ಈ ಕಡೆ ಬರಲು ಇಚ್ಛಿಸುತ್ತಿಲ್ಲ......" (*ಅಂತ್ಯಲೀಲಾ* ಭಾಗ ೧, ಜುಲೈ ೦೩, ಪು. ೧೯೯).

ಬ್ರಾಹ್ಮಸಮಾಜದ ಕೆಲವು ಸದಸ್ಯರು ರಾಮಕೃಷ್ಣರ ಶರೀರ ತ್ಯಾಗದ ನಂತರವೂ ಅವರ ವಿರುದ್ಧ ಆಕ್ರಮಣ ಮಾಡುವುದನ್ನು ಬಿಡಲಿಲ್ಲ. ಮ್ಯಾಕ್ಸ್ ಮುಲ್ಲರ್ ರಾಮಕೃಷ್ಣರ ಜೀವನಚರಿತ್ರೆಯನ್ನು ಬರೆದಿದ್ದನ್ನು ಕಂಡು ಕೇಶವಚಂದ್ರಸೇನನ ಅನುಯಾಯಿಯೊಬ್ಬ ನೇರವಾಗಿ ಮ್ಯಾಕ್ಸ್ ಮುಲ್ಲರ್‌ಗೆ ಒಂದು ಪತ್ರ ಬರೆದು, ರಾಮಕೃಷ್ಣರು ನಾಟಕ ನೋಡಲು ಹೋಗುತ್ತಿದ್ದ ವಿಚಾರವನ್ನು ಆತನಿಗೆ ತಿಳಿಸಿ, ನಾಟಕರಂಗದ ಹೆಂಡಕುಡುಕರು ಹಾಗೂ ದುರ್ನಡತೆಯ ಜನರೊಂದಿಗೆ ಅವರು ಅತ್ಯಂತ ಸಹಜವಾಗಿ ಬೆರೆಯುತ್ತಿದ್ದರೆಂಬ ಮಾಹಿತಿಯನ್ನೂ ಕೊಟ್ಟನು. ಈ ವಿಚಾರವನ್ನು ತಿಳಿದ ವೃದ್ಧ ಮ್ಯಾಕ್ಸ್ ಮುಲ್ಲರ್ ಆನಂದಿತರಾಗಿ ಹೀಗೆ ಉದ್ಗರಿಸಿದರು: "ಏಸುಕ್ರಿಸ್ತ ಹಾಗೂ ಬುದ್ಧರಂಥ ಮಹಾತ್ಮರ ಜೀವನದಲ್ಲಿಯೂ ಇಂಥ ಘಟನೆಗಳು ಕಂಡುಬರುತ್ತವೆ" (*ಅನ್ಯಾನ್ಯ ಪ್ರಸಂಗ*, ಪು. ೬೦).

ರಾಮಚಂದ್ರ ದತ್ತ ಶ್ರೀರಾಮಕೃಷ್ಣರ ಅತ್ಯಂತ ಆತ್ಮೀಯ ಭಕ್ತ. ಆತ ಎಂದೂ ನಾಟಕಶಾಲೆಯೊಳಗೆ ಕಾಲಿಟ್ಟಿರಲಿಲ್ಲ. ರಾಮಕೃಷ್ಣರ ಮೇಲಿನ ಅಚಲ ಶ್ರದ್ಧೆ ಕ್ರಮೇಣ ಅವನ ದೃಷ್ಟಿಕೋನವನ್ನು ಬದಲಾಯಿಸಿತು. ಅವನು ತನ್ನ 'ತತ್ತ್ವಮಂಜರಿ' ಪತ್ರಿಕೆಯಲ್ಲಿ ನಾಟಕರಂಗವನ್ನು ಜನಗಳಿಗೆ ಶಿಕ್ಷಣ ನೀಡಲು ಹೇಗೆ ಬಳಸಿಕೊಳ್ಳಬಹುದೆಂದು ವಿವರಿಸಲು, 'ನಾಟಕಗಳಲ್ಲಿ ಸಮಾಜ ಹಾಗೂ ನೀತಿ' ಎಂಬ ಲೇಖನವನ್ನು ಪ್ರಕಟಿಸಿದನು.

ತರುಣ ನರೇಂದ್ರ ನಾಟಕಶಾಲೆಯಿರುವ ಕಡೆಯ ರಸ್ತೆಯಲ್ಲಿಯೂ ಸುಳಿಯುತ್ತಿರಲಿಲ್ಲವಂತೆ. ಶ್ರೀರಾಮಕೃಷ್ಣರು 'ಚೈತನ್ಯ ಲೀಲಾ' ನಾಟಕ ನೋಡಿ, ನಟನಟಿಯರಲ್ಲೂ ನಾರಾಯಣನನ್ನು ಕಂಡು, ಶ್ರದ್ಧೆ ತೋರಿಸಿದ್ದನ್ನು ನೋಡಿ ಆತನಲ್ಲಿಯೂ ಆಮೂಲಾಗ್ರ ಪರಿವರ್ತನೆಯಾಯಿತು. ಗಿರೀಶನೊಂದಿಗೂ ನರೇಂದ್ರ ಸ್ನೇಹದಿಂದ ಬೆರೆಯಲಾರಂಭಿಸಿದನು. ಆದರೆ, ಶ್ರೀರಾಮಕೃಷ್ಣರು ನರೇಂದ್ರನಿಗೆ ಗಿರೀಶನೊಂದಿಗೆ ಹೆಚ್ಚು ಬೆರೆಯದಂತೆ ಎಚ್ಚರಿಸಿದ್ದರು. ತಾವು ಗಿರೀಶನಿಗೆ ಕೃಪೆ ತೋರಿಸಿದರೂ, ಸಂಯಮರಹಿತ ಬದುಕಿನ ಪಕ್ಷಪಾತಿಯಲ್ಲ ಎನ್ನುವುದನ್ನು ತರುಣರಿಗೆ ಮನದಟ್ಟು ಮಾಡುವುದೇ ಅವರ ಉದ್ದೇಶವಾಗಿರಬೇಕು. ಈ ಬಗ್ಗೆ ನರೇಂದ್ರನಿಗೂ ಸಾಕಷ್ಟು ಜಾಗೃತಿಯಿತ್ತು. ನರೇಂದ್ರನ ಪ್ರಖರ ಬುದ್ಧಿಮತ್ತೆ, ಪವಿತ್ರ ಚಾರಿತ್ರ್ಯಗಳನ್ನು ಕಂಡು ಗಿರೀಶ್ ಮೋಹಿತನಾದಂತೆ, ನರೇಂದ್ರನೂ ಗಿರೀಶನ ನಿಷ್ಕಪಟ, ಧೀರ ಸ್ವಭಾವವನ್ನು ಮೆಚ್ಚಿಕೊಂಡಿದ್ದನು. ಗಿರೀಶ್ ಒಮ್ಮೆ ನರೇಂದ್ರನನ್ನು ತನ್ನ 'ಬಿಲ್ವಮಂಗಳ' ನಾಟಕವನ್ನು ನೋಡಲು ಕರೆದುಕೊಂಡು ಹೋದನು. ನಾಟಕ ಮುಗಿದ ಮೇಲೂ ನರೇಂದ್ರನನ್ನು ಬಿಡದೆ ರಂಗದ ಒಳಭಾಗಕ್ಕೆ ಕರೆದೊಯ್ದನು. ಅಲ್ಲಿ ನಟನಟಿಯರು ಹರಟೆ ಹೊಡೆಯುತ್ತಾ ತಿರುಗಾಡುತ್ತಿದ್ದರು. ಈ ಅಶುಭ ವಾತಾವರಣವನ್ನು ಪ್ರವೇಶಿಸಿದ್ದೇ, ನರೇಂದ್ರ ಅತ್ತಿತ್ತ ನೋಡದೆ, ಅಲ್ಲಿದ್ದ ಒಂದು ತಂಬೂರಿಯನ್ನು ಎತ್ತಿಕೊಂಡು ತನ್ನ ಸುಮಧುರ ಕಂಠದಲ್ಲಿ ಭಕ್ತಿಗೀತೆಗಳನ್ನು ಹಾಡಲಾರಂಭಿಸಿದನು. ತನ್ಮಯನಾಗಿ ಹೋದ ಅವನ ಕಣ್ಣುಗಳಿಂದ ಅವಿರತವಾಗಿ ಅಶ್ರುಧಾರೆ ಸುರಿಯಿತು. ನಟನಟಿಯರು ತಮ್ಮ ಚಂಚಲತೆಯನ್ನು ಬಿಟ್ಟು ಗಂಭೀರಭಾವದವರಾದರು. ಅಲ್ಲಿನ ಪರಿಸ್ಥಿತಿಯಲ್ಲಿ ಉಂಟಾದ ಈ ಮಾರ್ಪಾಡನ್ನು ನೋಡಿ ಗಿರೀಶನಿಗೆ ಆನಂದವಾಯಿತು (*ಶ್ರೀಮತ್ ವಿವೇಕಾನಂದ ಸ್ವಾಮಿಜೀರ್ ಜೀವನೇರ್ ಘಟನಾವಲಿ*, ಭಾಗ ೧, ಪು. ೧೨೫). (*ಮುಂದುವರಿಯುವುದು*)